

ವಾರದ ಪತ್ರ

## ಕ್ರಿಕೆಟ್: ವಿಶ್ವಕಪ್ ಅಥವಾ ವಿಶ್ವಯುದ್ಧ?

ಭಾರತ–ನ್ಯೂಜಿಲೆಂಡ್ ನಡುವಿನ ವಿಶ್ವಕಪ್ ಕ್ರಿಕೆಟ್ ನಡುವಿನ ಸೆಮಿಫೈನಲ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ 50ನೇ ಶತಕ ಬಾರಿಸಿ ದಾಖಲೆ ನಿರ್ಮಿಸಿದರು. ಆಗ ಕೆಲವು ಕನ್ನಡ ವಾರ್ತಾ ವಾಹಿನಿಗಳು ಅದನ್ನು ವಿಜೃಂಭಿಸುವ ಭರದಲ್ಲಿ 'ವಿಶ್ವ ಯುದ್ಧ 2023' ಎಂದು ಪ್ರಸಾರ ಮಾಡಿದವು. ಅದೂ ಬ್ರೇಕಿಂಗ್ ನ್ಯೂಸ್ ಅಡಿಬರಹದಲ್ಲಿ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಸೌಹಾರ್ದ ಹುಟ್ಟುಹಾಕುವಂತೆ ಇರಬೇಕಾದ ಕ್ರೀಡಾ ಪಂದ್ಯಾವಳಿಗಳಿಗೆ ಮಹಾಯುದ್ಧದ ಹಣೆಪಟ್ಟಿ ಕಟ್ಟುವುದು ಎಷ್ಟು ಸರಿ? ಕನಿಷ್ಠ ನಾಗರಿಕ ಪ್ರಜ್ಞೆಯೂ ಇಲ್ಲದಂತೆ ವರ್ತಿಸುವುದು ಕ್ರೀಡಾ ಮನೋಭಾವಕ್ಕೆ ಮಾಡುವ ಅವಮಾನ ಅಲ್ಲವೇ? ವಿಶ್ವದ ಕೆಲವೆಡೆ ಭೀಕರ ಯುದ್ಧ ಸಂಭವಿಸುತ್ತಿರುವ ವಿಷಮ ಪರಿಸ್ಥಿತಿಯಲ್ಲಿ ಈ ರೀತಿ ಬ್ರೇಕಿಂಗ್ ನ್ಯೂಸ್ ಸಮಂಜಸವಲ್ಲ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಮಹಿಳೆಯರಿಗೆ ಮುಜುಗರವಾಗುವ ದೃಶ್ಯಗಳು ಬೇಡ

ಕಲರ್ಸ್ ಕನ್ನಡದ 'ಅಂತರಪಟ' ಧಾರಾವಾಹಿಯಲ್ಲಿ ಹೆಣ್ಣಿನ ಖಾಸಗಿ ಸಂಗತಿಯನ್ನು ಚಿತ್ರಿಸಿ, ಚರ್ಚಿಸಿ ಬಹಿರಂಗ ಮಾಡುವ ಅವಶ್ಯಕತೆ ಇತ್ತೇ? ಮನೆ ಮಂದಿ ಒಟ್ಟಿಗೆ ಟೀವಿ ನೋಡುವಾಗ ಹೆಂಗಸರು ಸಂಕೋಚದಿಂದ ಮುದುಡುವಂತಾಗಿದೆ. ಇಂತಹ ದೃಶ್ಯಗಳಿಗೆ ಖಂಡಿತ ಕತ್ತರಿ ಹಾಕಬೇಕು. ಮಕ್ಕಳ ಪ್ರಬುದ್ಧತೆಯನ್ನು ಹೆಚ್ಚಿಸುವ ಬಗ್ಗೆ ಧಾರಾವಾಹಿ ತಂಡಗಳು ಯೋಚಿಸಬೇಕು.

—ಕೆ.ಎಲ್. ಭಾರತಿ, ತುಮಕೂರು

## ಹತ್ತು ಮುತ್ತಾಗಲಿಲ್ಲ...

ಕಲರ್ಸ್ ಕನ್ನಡದ 'ಬಿಗ್ ಬಾಸ್'ನ ಒಂಬತ್ತು ಸಂಚಿಕೆಗಳನ್ನು ನೋಡಿದ ನಮಗೆ ಹತ್ತನೆಯ ಸಂಚಿಕೆ ಆಸಕ್ತಿದಾಯಕ ಅನ್ನಿಸಿಲ್ಲ. ಇದು ಕನ್ನಡದ್ದೋ ಅಥವಾ ಇಂಗ್ಲಿಷಿನ ಕಾರ್ಯಕ್ರಮವೋ ಅನ್ನಿಸುತ್ತಿದೆ. ಕೆಲವರು ಸಂಭಾಷಣೆ, ಜಗಳವನ್ನೂ ಇಂಗ್ಲಿಷ್‌ನಲ್ಲೇ ಮಾಡುತ್ತಾರೆ. ನಿತ್ಯವೂ ಜಗಳ ತಪ್ಪುವುದಿಲ್ಲ. ಸಂಗೀತಾ, ವಿನಯ್, ತನಿಷಾ, ನಮ್ರತಾ, ಕಾರ್ತಿಕ್ ಅಗ್ರಸ್ಥಾನದಲ್ಲಿದ್ದಾರೆ. ಉಳಿದವರು ತಮ್ಮ ಪಾಡಿಗೆ ತಾವಿದ್ದಾರೆ. ಆಟದಲ್ಲಿ ಮ್ಯಾಚ್ ಫಿಕ್ಸಿಂಗ್ ಇಣುಕುತ್ತಿರುವುದು ಗೋಚರವಾಗುತ್ತಿದೆ. ಇದೇನು ಮೊದಲೇ ಹೇಳಿಕೊಟ್ಟು ನಡೆಸುತ್ತಿರುವ ಆಟಗಳೇ ಎಂಬ ಸಂಶಯ ಕಾಡುತ್ತಿದೆ. ವಾರಾಂತ್ಯದಲ್ಲಿ ಕಿಚ್ಚ ತಪ್ಪು ಎಸಗಿದವರ ವಿರುದ್ಧ ಕ್ರಮ ತೆಗೆದುಕೊಂಡರೆ ಬಿಗ್ ಬಾಸ್‌ಗೆ ಕ್ಷೇಮ.

—ಪುಷ್ಪಾ ರಾವ್

## ಹೆಣ್ಣುಮಕ್ಕಳಿಂದ ಜಗವೇ ಸ್ನೇಹಮಯ

ಝೀ ಕನ್ನಡದ 'ಸೀತಾ ರಾಮ' ಧಾರಾವಾಹಿ ಅರ್ಥಪೂರ್ಣ ಬದುಕಿನ ಮಹತ್ವವನ್ನು ಪ್ರತಿಪಾದಿಸುತ್ತಿದೆ. ಒಂಟಿ ಮಹಿಳೆಯ ವ್ಯಕ್ತಿತ್ವ ಹೇಗಿದ್ದರೆ ಚೆನ್ನ ಎಂದು ತಿಳಿಸುತ್ತಿದೆ. ಹೆಣ್ಣು ಅವಮಾನವನ್ನು ಸಹಿಸುವ ಪರಿ ನಿಜಕ್ಕೂ ಭಿನ್ನವಾದುದು. ಮುಗ್ಧ ಮನದ ಮಕ್ಕಳು, ಅದರಲ್ಲೂ ಹೆಣ್ಣು ಮಗು ತನ್ನ ಪರಿಸರವನ್ನು ಸ್ನೇಹಮಯ ಮಾಡುತ್ತಾಳೆ. ತಂದೆ ಇಲ್ಲದ ಮಗು ಗೆಲುವಿಗಾಗಿ ಛಲ ಬಿಡದೆ ಸಾಗುವ ಪರಿ ಅಮೋಘ.

—ರಾಜೇಂದ್ರ ಹೆಗಡೆ, ಹಾವೇರಿ

## 'ಸರಿಗಮಪ'ದಲ್ಲಿ ಹೊಸ ಕೋಗಿಲೆಗಳು



ಝೀ ಕನ್ನಡದ 'ಸರಿಗಮಪ'ದಲ್ಲಿ ಹೊಸ ಪ್ರತಿಭೆಗಳನ್ನು ಪರಿಚಯಿಸಿದ್ದಾರೆ. ಹೊರ ರಾಜ್ಯ, ವಿದೇಶಗಳಲ್ಲಿನ ಗಾನ ಕೋಗಿಲೆಗಳನ್ನು ಹುಡುಕಿರುವುದು ಮೆಚ್ಚುಗೆಯ ಸಂಗತಿ. ಹಾಗೆಯೇ ಕನ್ನಡೇತರರಿಂದಲೂ ಕನ್ನಡ ಗೀತೆಗಳನ್ನು ಹಾಡಿಸಿ ಹೊಸತನವನ್ನು ತುಂಬಿದ್ದಾರೆ. ಇತ್ತೀಚೆಗೆ ಸರ್ದಾರ್ಜಿ ಒಬ್ಬರು ಸುಶ್ರಾವ್ಯವಾಗಿ ಕನ್ನಡ ಹಾಡನ್ನು ಹಾಡಿದ್ದು ನಮ್ಮ ಮನಗೆದ್ದಿದೆ.

—ರಮಾನಂದ ಶರ್ಮಾ, ನವದೆಹಲಿ

## ಹಾಡಿನ ಆಯ್ಕೆಯಲ್ಲಿ ವೈವಿಧ್ಯ ಅಗತ್ಯ

ಝೀ ವಾಹಿನಿಯ 'ಸರಿಗಮಪ' 20ನೇ ಆವೃತ್ತಿ ಯಾಕೋ ಸ್ವಲ್ಪ ನೀರಸ ಎನಿಸುತ್ತಿದೆ. ಹಾಡುಗಳ ಪುನರಾವರ್ತನೆ ಈಗಲೂ ಮುಂದುವರೆದಿದೆ. ದಕ್ಷಿಣ ಭಾರತದ ಸಿನಿಮಾ ಇತಿಹಾಸದಲ್ಲಿ ಕಂಠಸಿರಿಯ ಮೋಡಿ ಮಾಡಿದ್ದ ಪಿ.ಬಿ. ಶ್ರೀನಿವಾಸ್ ಅವರು ಹಾಡಿರುವ ಭಕ್ತ ಕುಂಬಾರ, ಭಕ್ತ ಕನಕದಾಸ ಚಿತ್ರದ ಹಾಡುಗಳನ್ನು ಹಾಡಿಸಿ ಹೊಸ ರೂಪ ನೀಡಬಹುದು. ಹಾಗೆಯೇ ಗಾನಕೋಗಿಲೆ ಎಸ್. ಜಾನಕಿ ಅವರ ಸುಮಧುರ ಹಳೆಯ ಹಾಡುಗಳನ್ನೂ ಪ್ರಸ್ತುತಪಡಿಸುವ ಮೂಲಕ ಮೂಲಕ ಏಕತಾನತೆಯನ್ನು ಮುರಿಯಬಹುದು. ಈ ಸೀಸನ್ ವೈವಿಧ್ಯದಿಂದ ಕೂಡಿರಲಿ ಎಂದು ಅಪೇಕ್ಷಿಸುತ್ತೇನೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ವಿಮರ್ಶೆ ಹೆಸರಲ್ಲಿ ಹೊಗಳಿಕೆಯೂ ತೆಗಳಿಕೆಯೂ

ಕನ್ನಡದ ಸುದ್ದಿ ವಾಹಿನಿಗಳು ಒಂದಲ್ಲ ಒಂದು ರೀತಿಯಲ್ಲಿ ಆಯಾ ವಾರದಲ್ಲಿ ಬಿಡುಗಡೆಯಾದ ಸಿನಿಮಾಗಳನ್ನು ಹಾಡಿ ಹೊಗಳುತ್ತವೆ. ಉದಾಹರಣೆಗೆ, 'ಫಸ್ಟ್ ಡೇ ಫಸ್ಟ್ ಶೋ' ಎಂಬ ಶೀರ್ಷಿಕೆಯಡಿ 'ಸಖತ್ ಆಗಿ ಎಂಟ್ರಿ ಕೊಟ್ಟ', 'ಮೊದಲ ಶೋಗೇ ಪ್ರೇಕ್ಷಕ ಫುಲ್ ಖುಷ್', 'ಕರ್ನಾಟಕದಲ್ಲಿ ದೂಳು ಎಬ್ಬಿಸಿದ', 'ನಾಯಕನ ಪಂಚಿಂಗ್ ಡೈಲಾಗ್ಸ್‌ಗೆ ಪ್ರೇಕ್ಷಕ ಫಿದಾ', 'ಥಿಯೇಟರ್‌ನಲ್ಲಿ ಚಿತ್ರಕ್ಕೆ ರೆಡ್ ಕಾರ್ಪೆಟ್ ಹಾಕಿದ ಅಭಿಮಾನಿಗಳು' — ಹೀಗೇ ಕಂಡೂ ಕೇಳರಿಯದ ಪದ ಪ್ರಯೋಗಗಳು.

ಸಿನಿಮಾ ಏನಾದ್ರೂ ಸೋತರೆ ಕೇಳಬೇಕೇ? 'ಸಿನಿಮಾ ಮೊದಲ ದಿನವೇ ತೋಪು', 'ಬರ್ಬಾದ್ ಆದ ಸಿನಿಮಾ ನಿರ್ಮಾಪಕ', 'ಎರಡನೆಯ ದಿನಕ್ಕೇ ಎತ್ತಂಗಡಿ', 'ಉಲ್ಟಾ ಹೊಡೆದ ವಿತರಕ' — ಇವು ಸುದ್ದಿಯ ಕೆಲವು ನಿದರ್ಶನಗಳು ಮಾತ್ರ. ಒಂದು ವಾರ ಮುಂಚೆ ಹೊಗಳಿದ್ದನ್ನು ಕೂಡಲೇ ಟೀಕಿಸುವ ಅಗತ್ಯ ಸುದ್ದಿಗೇಕೆ ಬೇಕು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ತರಾತುರಿಯ ಅಂತ್ಯ ಯಾರಿಗೆ ಪ್ರೀತಿ?

ಸ್ಟಾರ್ ಸುವರ್ಣ ವಾಹಿನಿಯ 'ದೃಷ್ಟಿ' ಅತ್ಯುತ್ತಮವಾಗಿ ಮೂಡಿ ಬರುತ್ತಿತ್ತು. ಹಿಂದಿಯ 'ನಜರ್' ಧಾರಾವಾಹಿಯ ಡಬ್ಬಿಂಗ್ ಆಗಿದ್ದರೂ ನಮ್ಮ ಮನ ಗೆದ್ದಿತ್ತು. ಇತ್ತೀಚೆಗೆ ಅದನ್ನು ಮಾಯ ಮಾಡಿದ್ದು ಬೇಸರವನ್ನು ಉಂಟು ಮಾಡಿತು. ಧಾರಾವಾಹಿಗಳನ್ನು ಅರ್ಧಕ್ಕೆ ನಿಲ್ಲಿಸುವುದು ಇಲ್ಲವೇ ತರಾತುರಿಯಲ್ಲಿ ಮುಗಿಸುವುದು ಬೇಡ.

—ಅನಸೂಯ ಟಿ., ತೀರ್ಥಹಳ್ಳಿ